**ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ .**

**ಸಿ.ಸಿ.ನಂ. 8818/2022**

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀನಿವಾಸ |
| ತಂದೆಯ ಹೆಸರು | : | ದಾಸಬೋವಿ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಗಾರೆಕೆಲಸ |
| ವಾಸಸ್ಥಳ | : | ದೇವಿರಮ್ಮನಹಳ್ಳಿಪಾಳ್ಯ, ನಂಜನಗೂಡು ತಾ. |

**ಸಾಕ್ಷಿಯನ್ನು ದಿನಾಂಕಃ 18.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ** ಸ. ಸ. **ಅ. ರವರಿಂದಃ**

ಚಾಸಾ–2 ನನ್ನ ಹೆಂಡತಿ. ಆರೋಪಿಗಳು ನಮ್ಮ ಗ್ರಾಮದ ನಿವಾಸಿಗಳಾಗಿರುತ್ತಾರೆ. ನನ್ನ ಹೆಂಡತಿ ನನಗೆ ಬೈಯ್ಯುತ್ತಿರುವಾಗ ಆರೋಪಿಗಳು ತಮಗೆ ಬೈಯ್ಯುತ್ತಿದ್ದಾರೆಂದು ತಿಳಿದುಕೊಂಡು ಕೇಳಿದ ವಿಚಾರವಾಗಿ ನಮಗು ಮತ್ತು ಆರೋಪಿಗಳಿಗು ಬಾಯಿ ಮಾತಿನ ಚರ್ಚೆಯಾಗಿದ್ದು, ಇಷ್ಟಕ್ಕೆ ನಾನು ಹೆದರಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ಎರಡು ದಾಖಲೆಗಳಿಗೆ ನನ್ನ ಸಹಿ ಪಡೆದಿರುತ್ತಾರೆ. ಸದರಿ ದಾಖಲೆಗಳು ದೂರು ಮತ್ತು ಅಮಾನತ್ ಮಹಜರ್ ಗಳಾಗಿದ್ದು, ಸಾಕ್ಷಿಯು ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ದೂರನ್ನು **ನಿ.ಪಿ–1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ–1(ಎ)** ಎಂದು, ಅಮಾನತ್ ಮಹಜರ್ ನ್ನು **ನಿ.ಪಿ–2** ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ–2(ಎ)** ಎಂದು ಗುರುತಿಸಲಾಯಿತು. ನಿ.ಪಿ–1 ಮತ್ತು ನಿ.ಪಿ–2 ರಲ್ಲಿ ಏನೆಲ್ಲಾ ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಮತ್ತು ಏನನ್ನೂ ವಶಪಡಿಸಿಕೊಂಡಿಲ್ಲ. ಆರೋಪಿಗಳು

ನನ್ನನ್ನು ಮತ್ತು ನನ್ನ ಹೆಂಡತಿಯನ್ನು ಉದ್ದೇಶಿಸಿ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಯಾವುದೇ ರೀತಿ ಹಲ್ಲೆ ಮಾಡಿಲ್ಲ, ಯಾರು ಕುಮ್ಮಕ್ಕು ನೀಡಿಲ್ಲ ಮತ್ತು ಯಾವುದೇ ಜೀವ ಬೆದಕರಿ ಹಾಕಿಲ್ಲ. ನಾನು ಪೊಲೀಸರಿಗೆ ಯಾವುದೇ ಮರು ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀಸವಾಲುಃ ಸ.ಸ.ಅ ರವರಿಂದಃ**

ದಿನಾಂಕ 25.06.2022 ರಂದು ಬೆಳಿಗ್ಗೆ 7.30 ಗಂಟೆ ಸಮಯದಲ್ಲಿ ನಮ್ಮ ಮನೆಯ ಮುಂಭಾಗದ ಖಾಲಿ ಜಾಗದಲ್ಲಿ ನನ್ನ ಹೆಂಡತಿ ನನ್ನನ್ನು ಉದ್ದೇಶಿಸಿ ಕೆಲಸಕ್ಕೆ ಹೋಗದೆ ಊರಿನಲ್ಲಿ ತಿರುಗಾಡುತ್ತಿದ್ದೀಯಾ ಎಂದು ಬೈಯ್ಯುತ್ತಿರುವಾಗ ಆರೋಪಿಗಳು ತಮ್ಮನೇ ಬೈಯ್ಯುತ್ತಿದ್ದಾರೆಂದು ತಪ್ಪಾಗಿ ತಿಳಿದುಕೊಂಡು ನಮ್ಮ ಜೊತೆ ಜಗಳ ತೆಗೆದು ನನ್ನ ಹೆಂಡತಿಯನ್ನು ಮತ್ತು ನನ್ನನ್ನು ಉದ್ದೇಶಿಸಿ, ಸೂಳೆಮುಂಡೆ, ಲೋಫರ್ ಮುಂಡೆ, ಸೂಳೆ ಮಗನೆ, ಬೋಳಿಮಗನೆ ಎಂದು ಬೈದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಕಲ್ಲಿನಿಂದ ಚಾಸಾ–2 ರವರ ಎಡಭಾಗದ ತಲೆಗೆ ಹೊಡೆದು ಅವರ ಜುಟ್ಟನ್ನು ಹಿಡಿದು ಎಳೆದಾಡಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಆರೋಪಿ ಮಚ್ಚನ್ನು ಹಿಡಿದುಕೊಂಡು ನನಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಆರೋಪಿ ಉಳಿದ ಆರೋಪಿಗಳಿಗೆ ಕುಮ್ಮಕ್ಕು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಈ ವಿಚಾರವಾಗಿ ನಿ.ಪಿ–1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ದೂರು ಕೊಟ್ಟ ಮೇರೆಗೆ ದಿನಾಂಕ 02.07.2022 ರಂದು ಪೊಲೀಸರು ಠಾಣೆಯಲ್ಲಿ ನಿಪಿ–2 ರಂತೆ ಮಹಜರ್ ಮಾಡಿ ಸಿ.ಡಿಯನ್ನು ವಶಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಈಗ ನನಗೆ ಓದಿ ಹೇಳಿದಂತೆ ಪೊಲೀಸರಿಗೆ ಮರು ಹೇಳಿಕೆ ನೀಡಿರುತ್ತೇನೆಂದರೆ

ಸರಿಯಲ್ಲ. ಸಾಕ್ಷಿಯು ಸದರಿ ಮರು ಹೇಳಿಕೆಯನ್ನು ಅಲ್ಲಗಳೆದಿದ್ದರಿಂದ ಕೆಂಪು ಶಾಹಿಯಿಂದ ಗುರುತಿಸಲಾದ ಸದರಿ ಮರು ಹೇಳಿಕೆಯ ಭಾಗವನ್ನು **ನಿ.ಪಿ-3** ಎಂದು ಗುರುತಿಸಲಾಯಿತು. ಆರೋಪಿಗಳು ಹಾಗು ನಾನು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಆ ಕಾರಣದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲುಃ** ಆರೋಪಿಗಳ ಪರ ವಕೀಲರಿಂದಃ ಏನೂ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**

**ನಂಜನಗೂಡು.**